
# ಫೈಬ್ರಾಯ್ಡ್‌ಗೆ ಪರಿಹಾರ

ಗರ್ಭಕೋಶದ ಮಾಂಸಖಂಡದ ಪದರದಲ್ಲಿ ಸ್ಥಾನೀಯವಾಗಿ ಬೆಳೆಯುವ ಗಡ್ಡೆಗಳಿಗೆ ಫೈಬ್ರಾಯ್ಡ್ ಎಂದು ಕರೆಯುತ್ತಾರೆ. ಫೈಬ್ರಾಯ್ಡ್ ಗೆ ಮಯೋಮಾ ಎಂದೂ ಹೆಸರುಂಟು ಫೈಬ್ರಾಯ್ಡ್ ಗಳ ಗಾತ್ರದಲ್ಲಿ ಬಹಳ ಅಂತರವಿರುತ್ತದೆ. ಬಟಾಣಿಗಾತ್ರದಿಂದ ಹಿಡಿದು ದೊಡ್ಡ ಕುಂಬಳಕಾಯಿ ಗಾತ್ರ, ತುಂಬು ಗರ್ಭಿಣಿ ಯಷ್ಟು ಬೆಳವಣಿಗೆ ಹೊಂದ ಬಹುದಾಗಿದೆ

ಫೈಬ್ರಾಯ್ಡ್ ಗೆಡ್ಡೆಗಳು ಗರ್ಭಕೋಶ (uterus)ದಲ್ಲಿ ಮೇಲ್ಪದರ, ಒಳಪದರ ಮತ್ತು ಮಾಂಸದ ಪದರದಲ್ಲಿ ಬೆಳೆಯಬಹುದು ಅಥವಾ ಪದರದಲ್ಲಿ ಜೋತುಬಿದ್ದಂತೆ ಬೆಳೆಯಬಹುದು. ಒಂದು ಅಥವಾ ಹೆಚ್ಚಿನ ಫೈಬ್ರಾಯ್ಡ್ ಗಳು ಒಟ್ಟಿಗೇ ಬೆಳೆಯುವ ಸಾಧ್ಯತೆ ಇರುತ್ತದೆ. ಬಹಳ ವರ್ಷದವರೆಗೆ ಚಿಕ್ಕದಾಗಿದ್ದು, ನಿಧಾನವಾಗಿ ಬೆಳೆಯುವುದು ಸಾಮಾನ್ಯವಾಗಿ ಕಂಡುಬರುವುದು, ಅಪರೂಪಕ್ಕೆ ಶೀಘ್ರ ಬೆಳವಣಿಗೆಯನ್ನು ಗಮನಿಸಲಾಗಿದೆ.




ಸಾಮಾನ್ಯವಾಗಿ 30-40ರ ಪ್ರಾಯದ ಮಹಿಳೆಯರಲ್ಲಿ ಫೈಬ್ರಾಯ್ಡ್ ಬೆಳವಣಿಗೆ ಕಂಡುಬರುವುದು. ಈ ಫೈಬ್ರಾಯ್ಡ್ ನ ರೋಗಲಕ್ಷಣಗಳು ಈ ಕೆಳಗಿನ ಯಾವುದಾದರೂ ಆಗಿರಬಹುದು

## ಋತುಸ್ರಾವದಲ್ಲಿನ ಬದಲಾವಣೆಗಳು / ಏರುಪೇರು

- ಹೆಚ್ಚಿನ ದಿನಗಳ / ಪ್ರಮಾಣದ ಋತುಸ್ರಾವ
- ಋತುಸ್ರಾವದ ಸಮಯದಲ್ಲಿ ಅತಿ ಹೆಚ್ಚು ಕಿಬ್ಬೊಟ್ಟೆ ನೋವು (DYSMENORRHOEA)
- ಋತುಚಕ್ರದ ನಡುವೆ ರಕ್ತಸ್ರಾವ
- ರಕ್ತಹೀನತೆ
- ನೋವು -ಕಿಬ್ಬೊಟ್ಟೆ ನೋವು ಮತ್ತು ಲೈಂಗಿಕ ಕ್ರಿಯೆಯ ಸಮಯದಲ್ಲಿ ನೋವು
- ಒತ್ತಡದ ಪರಿಣಾಮಗಳು-ಪದೇ ಪದೇ ಮೂತ್ರ ವಿಸರ್ಜಿಸಬೇಕೆಂಬ ಅನಿಸಿಕೆ, ಮಲಬದ್ಧತೆ, ಹೊಟ್ಟೆನೋವು, ಮೂತ್ರಕೋಶದ ನಂಜು
- ಗಾತ್ರದ ಗ್ರಹಿಕೆ- ಹೊಟ್ಟೆ ಭಾರವೆನಿಸುವುದು ಪದೇಪದೇ ಗರ್ಭಪಾತವಾಗುವುದು
- ಬಂಜೆತನ

## ಫೈಬ್ರಾಯ್ಡ್ ಅಡ್ಡಪರಿಣಾಮಗಳು

ನೋವು, ವಾಂತಿಯಾಗುವುದು-ಫೈಬ್ರಾಯ್ಡ್ ತಿರುಗುವುದರಿಂದ, ಬಂಜೆತನ, ಶೀಘ್ರ ಬೆಳವಣಿಗೆ- ಕ್ಯಾನ್ಸರ್ ಆಗಿರಬಹುದು

## ಪರೀಕ್ಷಾ ವಿಧಾನಗಳು

ಫೈಬ್ರಾಯ್ಡ್ ಕಂಡುಹಿಡಿಯಲು ರೋಗಲಕ್ಷಣಗಳ ನಿರ್ದೇಶನದ ಮೇರೆಗೆ ಹೊಟ್ಟೆ ಮತ್ತು ಯೋನಿಯಿಂದ ಪರೀಕ್ಷೆ, ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಅಗತ್ಯವಿರುತ್ತದೆ. ಕೆಲವೊಮ್ಮೆ ಹಿಸ್ಟಿರೋ ಸ್ಕೋಪಿ (HYSTEROSCOPY) ಮಾಡಿ ಒಳಗಿನ ಫೈಬ್ರಾಯ್ಡ್‌ನನ್ನು ಈ ಮೂಲಕವೇ ತೆಗೆಯಬಹುದಾಗಿದೆ. ಲ್ಯಾಪರೋಸ್ಕೋಪಿ/ಹಿಸ್ಟಿರೋ ಸ್ಕೋಪಿ ಒಟ್ಟಿಗೆ ಉಪಯೋಗಿಸಿ ಫೈಬ್ರಾಯ್ಡ್ ಗೆಡ್ಡೆಗಳನ್ನು ತೆಗೆಯಬಹುದಾಗಿದೆ.

ಭಾರೀ ಗಾತ್ರದ ಫೈಬ್ರಾಯ್ಡ್ ಇದ್ದಲ್ಲಿ ಹೊಟ್ಟೆಯ ಭಾಗದಿಂದ ಶಸ್ತ್ರ ಚಿಕಿತ್ಸೆ ಮಾಡಬೇಕಾಗುತ್ತದೆ.

50% ಫೈಬ್ರಾಯ್ಡ್‌ಗಳು ಯಾವ ರೋಗಲಕ್ಷಣಗಳಂಟು ಮಾಡುವುದಿಲ್ಲ

ನೋವು ಹೆಚ್ಚಾದಲ್ಲಿ, ಋತುಚಕ್ರ/ಋತುಸ್ರಾವದ ಏರುಪೇರಾದಲ್ಲಿ ಕ್ಯಾನ್ಸರ್ ಬದಲಾವಣೆಯ ಲಕ್ಷಣಗಳಿದ್ದಲ್ಲಿ, ಅತೀ ಶೀಘ್ರ ಹೆಚ್ಚು ಬೆಳವಣಿಯಾದಲ್ಲಿ , ಬಂಜೆತನಕ್ಕೆ ಕಾರಣವಾದಲ್ಲಿ ಫೈಬ್ರಾಯ್ಡ್ ಗೆಡ್ಡಗಳನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆಯಬೇಕಾಗುತ್ತದೆ

ಯಾವುದೇ ಔಷಧದ ಮೂಲಕ ಫೈಬ್ರಾಯ್ಡ್ ಗೆಡ್ಡೆಗಳನ್ನು ಮೂಲತಃ ನಿರ್ಮೂಲನೆ ಮಾಡಲು ಸಾಧ್ಯವಾಗುವುದಿಲ್ಲ. ಎಲ್ಲ ಔಷಧಗಳು ತಾತ್ಕಾಲಿಕವಾಗಿ ಪರಿಣಾಮ ನೀಡಬಲ್ಲವು

## ಫೈಬ್ರಾಯ್ಡ್ ಸಂಬಂಧಿತ ಶಸ್ತ್ರಚಿಕಿತ್ಸೆ

1. ಮಯೋಮೆಕ್ಟಮಿ (Myomectomy)- ಫೈಬ್ರಾಯ್ಡ್ ತೆಗೆಯುವುದು ಬಂಜೆತನವಿರುವವರಿಗೆ ಮತ್ತು ಚಿಕ್ಕ ವಯಸ್ಸಿನವರಿಗೆ ಈ ವಿಧಾನ ಸೂಕ್ತವಾಗಿದೆ.
2. ಹಿಸ್ಟೆರೆಕ್ಟಮಿ (Hysterectomy)- ಗರ್ಭಚೀಲದ ನಿರ್ಮೂಲನೆ ಕುಟುಂಬ ಪೂರ್ಣವಾದವರಿಗೆ ಮತ್ತು ಭಾರೀ ಪ್ರಮಾಣದ ಫೈಬ್ರಾಯ್ಡ್ ಗೆಡ್ಡೆಯಿದ್ದಲ್ಲಿ ಈ ವಿಧಾನ ಸೂಕ್ತವಾಗಿದೆ

**ಫೈಬ್ರಾಯ್ಡ್ ರೋಗಲಕ್ಷಣಗಳ ಅರಿವಿರಲಿ, ಸಕಾಲಿಕ ವೈದ್ಯಕೀಯ ತಪಾಷಣೆ ಮಾಡಿಸಿ ನಿಶ್ಚಿಂತರಾಗಿರಿ.**



**ಡಾ|| ವಿ. ನಾರಾಯಣಸ್ವಾಮಿ**

ಎಂ.ಬಿ.ಬಿ.ಎಸ್., ಎಂ.ಡಿ., ಎಫ್‌ಎಜಿಇ,
ಎಫ್‌ಎಐಎಂಎಸ್, ಯುಎಸ್‌ಎಂಎಲ್‌ಇ (ಯುಎಸ್‌ಎ)
**MBBS, MD, FAGE, FAIMS, USMLE (USA)** ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಚೇರ್‌ಮನ್ ಮತ್ತು ಸಿ.ಇ.ಓ.



**ಡಾ|| ಪ್ರಿಯದರ್ಶಿನಿ ಬಿ**

ಎಂ.ಬಿ.ಬಿ.ಎಸ್.
ಡಿಜಿಒ, ಡಿಎನ್‌ಬಿ (ಒಬಿಜಿ)
**MBBS, DGO, DNB ( OBG )**

# ನಾರಾಯಣ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

(ನಾರಾಯಣ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್ಸ್ ಪ್ರೈ.ಲಿ.,ನ ಒಂದು ಘಟಕ)

ನಂ.6, 7 ಮತ್ತು 8, 18ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆ, ಮಾರ್ಗೋಸ ರೋಡ್ ಬಿಎಂಟಿಸಿ ಬಸ್‌ಸ್ಟ್ಯಾಂಡ್ ಹತ್ತಿರ, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು-560055.
ದೂ: 080-2308 2900, 2308 4000/99, ಮೊಬೈಲ್: +91 94480 53952 / 94835 29529,
ಇ-ಮೇಲ್: info@narayanasuperspecialityhospitals.in ವೆಬ್: www.narayanasuperspecialityhospitals.in., ಫೇಸ್‌ಬುಕ್: www.facebook.com/nssshpvtltd